# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಸಭೆ/ಸಂಖ್ಯೆ:/ /2022-23

ವಾರ್ಡ್ ನಂ. 107/143/ಶಿವನಗರ
ಬಹುಮಹಡಿಗಳ ಸಂಕೀರ್ಣ,
ಧೋಬಿ ಘಾಟ್, ಬಿ.ಬಿ.ಎಂ.ಪಿ.
ಬೆಂಗಳೂರು.

ರವರಿಗೆ,

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಎನ್.ಡಬ್ಲ್ಯೂ-01 ಉಪವಿಭಾಗ, 1ನೇ ಎನ್. ಬ್ಲಾಕ್, ರಾಜಾಜಿನಗರ
ಮೋದಿ ಆಸ್ಪತ್ರೆ , [ವಿಧ್ಯಾವರ್ಧಕ ಶಾಲೆ ಹತ್ತಿರ]
ಬೆಂಗಳೂರು.

**ವಿಷಯ:** ದಿನಾಂಕ: 03.09.2022ರಂದು ವಾರ್ಡ್ ನಂ. 143 [ಹಳೇದು-107] ಶಿವನಗರದ ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ಕುರಿತು.

**ಉಲ್ಲೇಖ:** 1. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರ ಕಛೇರಿ ಆದೇಶ ಸಂಖ್ಯೆ: ಬಿ12[5] ಪಿಆರ್/ 35/ 2020-21. ದಿನಾಂಕ:21.09.2020
2. ಸಾರ್ವಜನಿಕರು ಮತ್ತು ಸದಸ್ಯರು ರವರ ದೂರಿನ ಮೇರೆಗೆ

************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ: 03.09.2022ರಂದು ವಾರ್ಡ್ ನಂ. 143 [ಹಳೇದು-107] ಶಿವನಗರದ ವಾರ್ಡ್ ಕಮಿಟಿ ಸಭೆಗೆ ಹಾಜರಾಗಿ ಸಾರ್ವಜನಿಕರ ಕುಂದು ಕೊರತೆಗಳನ್ನು ಪರಿಹರಿಸುವಂತೆ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರ, ಉಲ್ಲೇಖ 1ರನ್ವಯ ತಿಂಗಳ ಮಾಹೆಯಲ್ಲಿ ಮೊದಲನೇ ಶನಿವಾರ ಮತ್ತು 3ನೇ ಶನಿವಾರ ವಾರ್ಡ್ ಕಮಿಟಿ ಸಭೆಯನ್ನು ಮಾಡುವಂತೆ ಆದೇಶ ಇದ್ದರ ಪ್ರಯುಕ್ತ ಸಭೆಗೆ ಹಾಜರಾಗುವಂತೆ ಅಂತರ್ ಜಾಲದ ಮೂಲಕ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಆದರೂ ಸಹ ಸಾರ್ವಜನಿಕರ ಕುಂದು ಕೊರತೆಗಳಿಗೆ ಉತ್ತರಿಸದೆ ಸಭೆಗೆ ಗೈರು ಹಾಜರಾಗಿರುವುದು ಸಾಭೀತಾಗಿರುತ್ತದೆ.

ಆದುದರಿಂದ ಸಭೆಯಲ್ಲಿ ಸದಸ್ಯರು ಮತ್ತು ಸಾರ್ವಜನಿಕರು ವಾರ್ಡ್ ನಂ. 143 [107/ಶಿವನಗರ] ವಾರ್ಡ್ ವ್ಯಾಪ್ತಿಯಲ್ಲಿ ಬರುವ ಭಾಗಶಃ ಶಿವನಗರ, ಮಹಾಗಣಪತಿನಗರ, ರಾಜಾಜಿನಗರ 3ನೇ ಹಂತ, 5ನೇ ಹಂತ ವ್ಯಾಪ್ತಿಯಲ್ಲಿ ಒಳಚರಂಡಿ ಮ್ಯಾನ್ ಹೋಲ್ ಗಳು ಮತ್ತು ಪೈಪ್ ಲೈನ್ ಗಳು ನಿಯಮಾನುಸಾರ ದುರಸ್ಥಿಪಡಿಸದೆ ಮ್ಯಾನ್ ಹೋಲ್ ಗಳಲ್ಲಿ ಹೂಳು ತುಂಬಿರುವುದನ್ನು ಕ್ರಮ ಬದ್ಧವಾಗಿ ನಿರ್ವಹಿಸುವುದರಲ್ಲಿ ವಿಫಲರಾಗಿರುತ್ತಾರೆಂದು ಸಬೆಯಲ್ಲಿ ಒಕ್ಕರಲುನಿಂದ ಮಾನ್ಯ ನೋಡಲ್ ಅಧಿಕಾರಿರವರು ವಾರ್ಡ್ ಕಮಿಟಿ ಸಮುಖದಲ್ಲಿ ದೂರು ನೀಡಿರುವುದರಿಂದ ದಿನಾಂಕ: 03.09.2022ರ ವಾರ್ಡ್ ಕಮಿಟಿ ಸಭೆಯನ್ನು ರದ್ದು ಮಾಡುವಂತೆ ಅಡಚಣೆ ಮಾಡಿರುವ ಪ್ರಯುಕ್ತ ಸಭೆಯನ್ನು ದಿನಾಂಕ: 07.09.2022ರಂದು ಮುಂದೂಡಲಾಗಿರುತ್ತದೆ. ಆದುದರಿಂದ ಈ ಎಲ್ಲಾ ನ್ಯೂನತೆಗಳನ್ನ ಕಮಿಟಿ ಸದಸ್ಯರು ಮತ್ತು ಸಾರ್ವಜನಿಕರ ಮುಂದೆ ಉತ್ತರಿಸಲು ತಾವು ಗೈರು ಹಾಜರಾಗಿರುತ್ತೀರಿ. ಆದ ಪ್ರಯುಕ್ತ ಸರ್ಕಾರಿ ನಿಯಮಾವಳಿ ಪ್ರಕಾರ ಕರ್ತವ್ಯವನ್ನು ನಿರ್ಲಕ್ಷ ಮಾಡಿರುವುದರಿಂದ ಏಕೆ ನಿಮ್ಮ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವಂತೆ ಮೇಲಾಧಿಕಾರಿಗಳಿಗೆ ದೂರು ನೀಡಲಾಗುವುದು.

ಪು.ತಿ.ನೋ.

Scanned by CamScanner

ಆದುದರಿಂದ ಈ ಪತ್ರ ತಲುಪಿದ ತಕ್ಷಣ ನಿಮ್ಮ ಸಮಜಾಯಿಷಿಯನ್ನು ದಿನಾಂಕ:07.09.2022ರ ಬೆಳಗ್ಗೆ 10.30 ಗಂಟೆಗೆ ವಾರ್ಡ್ ಕಮಿಟಿ ಸಭೆಗೆ ಖುದ್ದು ಹಾಜರಾಗಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸಮಜಾಯಿಷಿ ನೀಡಬೇಕಾಗಿ ಹಾಗೂ ಇನ್ನೂ ಮುಂದೆ ಸಭೆಗೆ ಗೈರು ಹಾಜರಾದರೆ ನೇರವಾಗಿ ಮುಖ್ಯ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು. ರವರಿಗೆ ನಿಮ್ಮ ಮೇಲೆ ಶಿಸ್ತು ಕ್ರಮಕ್ಕೆ ಪತ್ರ ವ್ಯವಹರಿಸಲಾಗುವುದು. ಎಂಬ ಮಾಹಿತಿಯನ್ನು ತಮಗೆ ರವಾನಿಸಲಾಗಿದೆ.

ತಮ್ಮ ನಂಬುಗೆಯ

3/9/2022

ವಾರ್ಡ್ ಕಮಿಟಿ ಕಾರ್ಯದರ್ಶಿ
ವಾರ್ಡ್ ನಂ. 107/143
ದೋಬಿಘಾಟ್, ಬಿ.ಬಿ.ಎಂ.ಪಿ.

ಪ್ರತಿಯನ್ನು:

: ಮಾನ್ಯ ವಲಯ ಆಯುಕ್ತರು, ಪಶ್ಚಿಮ ವಲಯ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ರವರ ಮಾಹಿತಿಗಾಗಿ

: ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ರವರ ಮಾಹಿತಿಗಾಗಿ

: ಮಾನ್ಯ ಮುಖ್ಯ ಅಭಿಯಂತರರು, ಆಯುಕ್ತರು, ಪಶ್ಚಿಮ ವಲಯ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ರವರ ಮಾಹಿತಿಗಾಗಿ

Scanned by CamScanner